ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಪೌರತ್ವ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ    ದಿನಾಂಕ : DATE : 4/1/2020

# ‘ಹಿಂದುಗಳು ಖಡ್ಗ ಹಿಡಿದರೆ ನಿಮಗೇ ಕಷ್ಟ’

## ಪೌರತ್ವ ತಿದ್ದುಪಡಿ ಕಾಯ್ದೆ ವಿರೋಧಿಗಳಿಗೆ ಬಿಜೆಪಿ ಶಾಸಕ ಸೋಮಶೇಖರ ರೆಡ್ಡಿ ಖಡಕ್ ಎಚ್ಚರಿಕೆ

• **ಕನ್ನಡಪ್ರಭ ವಾರ್ತೆ** ಬಳ್ಳಾರಿ

ದೇಶದಲ್ಲಿ ಹಿಂದು- ಮುಸ್ಲಿಮರು ಸಹೋದರರಂತೆ ಬದುಕುತ್ತಿದ್ದು, ಕಾಂಗ್ರೆಸ್‌ನವರು ದಾರಿ ತಪ್ಪಿಸುತ್ತಿದ್ದಾರೆ ಎಂದು ಆರೋಪಿಸಿರುವ ಶಾಸಕ ಸೋಮಶೇಖರ ರೆಡ್ಡಿ, ಒಂದು ವೇಳೆ ಹಿಂದುಗಳು ಖಡ್ಗ ಹಿಡಿದು ದುರ್ಗಮ್ಮ ದೇವಿ ದರ್ಶನ ಪಡೆದುಕೊಂಡು ಬಂದರೆ ನಿಮಗೇ ಕಷ್ಟ ಆಗುತ್ತದೆ ಎಂದು ಹೇಳಿದ್ದಾರೆ.

ಪೌರತ್ವ ಕಾಯ್ದೆ ತಿದ್ದುಪಡಿ (ಸಿಎಎ) ಬೆಂಬಲಿಸಿ ದೇಶಭಕ್ತ ನಾಗರಿಕರ ವೇದಿಕೆ ಶುಕ್ರವಾರ ಹಮ್ಮಿಕೊಂಡಿದ್ದ ಮೆರವಣಿಗೆ ಹಾಗೂ ಬಹಿರಂಗ ಸಮಾವೇಶದಲ್ಲಿ ಮಾತನಾಡಿದ ಶಾಸಕ ರೆಡ್ಡಿ, ಪೌರತ್ವ ತಿದ್ದುಪಡಿ ಕಾಯ್ದೆ ವಿರೋಧಿಸುತ್ತಿರುವ ಪ್ರತಿಪಕ್ಷ ಹಾಗೂ ಸಂಘಟನೆಗಳ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಕಾಯ್ದೆ ವಿರೋಧಿಸಿ ಬಳ್ಳಾರಿಯಲ್ಲಿ ಪ್ರತಿಭಟನೆ ನಡೆಸಿದರೆ ನಾವು ಸುಮ್ಮನಿರಲ್ಲ. ನಾವು ಹಿಂದುಗಳು ಶೇ.80ರಷ್ಟು ಇದ್ದೀವಿ. ನೀವು ಇರೋದು ಬರೀ ಶೇ.17ರಷ್ಟು ಮಾತ್ರ. ಹೆಚ್ಚಿಗೆ ನಖರಾ ಮಾಡಿದ್ರೆ ನಿಮ್ಮ ದೇಶಕ್ಕೆ ಕಳಿಸಬೇಕಾಗುತ್ತದೆ ಹುಷಾರ್ ಎಂದರು.

**ತೇಜಸ್ವಿ ಹೇಳಿಕೆ ಸಮರ್ಥನೆ:** ದೇಶದಲ್ಲಿ ನಡೆಯುತ್ತಿರುವ ಪೌರತ್ವ ಕಾಯ್ದೆ ವಿರುದ್ಧದ ಹೋರಾಟ ಕಾಂಗ್ರೆಸ್ ಪ್ರಾಯೋಜಿತ ಎಂದು ಆರೋಪಿಸಿದ ಸೋಮಶೇಖರ ರೆಡ್ಡಿ, ಸಂಸದ ತೇಜಸ್ವಿ ಅವರು ಹೇಳಿದ್ದು ಸರಿ ಎಂದು ಸಮರ್ಥಿಸಿಕೊಂಡರು. ಪಂಕ್ಚರ್ ಹಾಕೋರನ್ನು ಹೆಚ್ಚು ಓದಿದವರು ದಾರಿ ತಪ್ಪಿಸುತ್ತಿದ್ದಾರೆ. ಕಾಯ್ದೆಯಿಂದ ಯಾರಿಗೂ ತೊಂದರೆ ಇಲ್ಲ ಎಂದ ಮೇಲೆ ಹೋರಾಟ ಮಾಡಲು ನಿಮಗೇನು ಹುಳು ಕಡಿಯುತ್ತಿದೆಯಾ? ಆ ಹುಳು ಪಾಕಿಸ್ತಾನದ್ದಾ? ಬಾಂಗ್ಲಾದೇಶದ್ದಾ ಎಂದರು.



ಕಾಂಗ್ರೆಸ್‌ನವರು ಬೇಕೂಫ್‌ಗಳು. ಇವರಿಗೆ ಸರಿಯಾಗಿ ರಾಷ್ಟ್ರಗೀತೆ ಹಾಡಲು ಬರಲ್ಲ. ಅವರ ಮಾತು ಕೇಳಿ ನೀವು ಬೀದಿಗೆ ಬರ್ತೀರಾ? ಹಿಂದುಗಳು ಯಾರನ್ನೂ ದೇಶ ಬಿಟ್ಟು ಓಡಿಸುವುದಿಲ್ಲ. ನಿಮಗೇನಾದರೂ ಓಡಿ ಹೋಗಬೇಕು ಎನಿಸಿದರೆ ಹೋಗಿ. ನಿಮ್ಮನ್ನು ಯಾರೂ ತಡೆಯೋದಿಲ್ಲ. ಇಲ್ಲಿ ಸೇರಿರುವವರು ಕೇವಲ ಶೇ.5ರಷ್ಟು ಮಾತ್ರ. ಇನ್ನುಳಿದ ಶೇ.95 ಮಂದಿ ಹಿಂದುಗಳು ಒಗ್ಗಟ್ಟಾಗಿ ಬಂದು ಉಫ್ ಎಂದರೆ ನೀವು ಹಾರಿ ಹೋಗ್ತೀರಾ ಎಂದು ಹೇಳಿದರು.

**ಫ್ಯಾಮಿಲಿ ಪ್ಲಾನಿಂಗ್ ಇಲ್ವಾ?:** ಇದೇ ವೇಳೆ ಸಾರ್ವಜನಿಕರ ಆಸ್ತಿ ಹಾನಿ ಮಾಡಲು ನಿಮಗ್ಯಾವ ಹಕ್ಕಿದೆ ಎಂದು ಪ್ರಶ್ನಿಸಿದ ಸೋಮಶೇಖರ ರೆಡ್ಡಿ ಅವರು, ಯೋಗಿ ಆದಿತ್ಯನಾಥ ಹೀರೋ, ದಮ್ ಇರೋ ಮುಖ್ಯಮಂತ್ರಿಯಾಗಿದ್ದು ಸರಿಯಾದ ನಿರ್ಧಾರವನ್ನೇ ಕೈಗೊಂಡಿದ್ದಾರೆ ಎಂದು ಸಮರ್ಥಿಸಿಕೊಂಡರು. ನೀವು ಹತ್ತತ್ತು ಮಂದೀನ ಹಡಿತೀರಿ. ನಿಮಗೇನು ಫ್ಯಾಮಿಲಿ ಪ್ಲಾನಿಂಗ್ ಇಲ್ವಾ? ನಾವು ಹಿಂದುಗಳು 50 ಜನರನ್ನು ಹಡಿತೀವಿ ಎಂದರು.

**ಪ್ರಕರಣ ದಾಖಲು:** ಸೋಮಶೇಖರ್ ರೆಡ್ಡಿ ಅವರು ಪ್ರಚೋದನಕಾರಿ ಭಾಷಣ ಮಾಡಿದ್ದಾರೆ ಎಂದು ಕಾಂಗ್ರೆಸ್ ಮುಖಂಡರು ಗಾಂಧಿನಗರ ಠಾಣೆಯಲ್ಲಿ ದೂರು ನೀಡಿದ್ದು ಪ್ರಕರಣ ದಾಖಲಾಗಿದೆ.

3